ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ

ಎ.ಡಿ.ಆರ್. ಕಟ್ಟಡ, ದಿವಾಣಿ ನ್ಯಾಯಾಲಯಗಳ ಆವರಣ, ಪಿ.ಬಿ. ರಸ್ತೆ, ಧಾರವಾಡ – 580001

**DISTRICT LEGAL SERVICES AUTHORITY, DHARWAD**

ADR Building, Civil Court Premises, B.P.Road, Dharwad - 580 001.

Telephone: 0836 – 2740128 E-mail ID: dlsa.dwd2@gmail.com

ಸಂಖ್ಯೆ: ಜಿಕಾಸೇಪ್ರಾಧಾ: 876 /2025 ದಿನಾಂಕ: 16/09/2025

# ಪ್ರಕಟಣೆ

ಮಾನ್ಯರೇ,

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಧಾರವಾಡ ಮತ್ತು ಹುಬ್ಬಳ್ಳಿ, ಕುಂದಗೋಳ, ಕಲಘಟಗಿ & ನವಲಗುಂದ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಅರೇ ಕಾನೂನು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1.ಕ.ರಾ.ಕಾ.ಸೇ.ಪ್ರಾ, ಬೆಂಗಳೂರವರ ಪತ್ರ ಸಂಖ್ಯೆ: 01/PLV/2025 ದಿನಾಂಕ: 12-09-2025.

2. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡದ ಕಛೇರಿಯ ಆಡಳಿತ ಆದೇಶ ಸಂಖ್ಯೆ: 19 /2025

* * * * *

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ 01 ರನ್ವಯ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಅಧೀನ ಕಾರ್ಯನಿರ್ವಹಿಸುತ್ತಿರುವ ತಾಲೂಕು ಕಾನೂನು ಸೇವಾ ಸಮಿತಿಗಳಾದ ಹುಬ್ಬಳ್ಳಿ, ಕುಂದಗೋಳ, ನವಲಗುಂದ ಮತ್ತು ಕಲಘಟಗಿ ಇವರ ಕಾರ್ಯವ್ಯಾಪ್ತಿಯಲ್ಲಿ ಅರೇ ಕಾನೂನು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಆಸಕ್ತಿಯನ್ನು ಹೊಂದಿರುವ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

ಆದ ಕಾರಣ ವೈಧ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು, ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು, ಪ್ರಾಧ್ಯಾಪಕರು, ಕಾನೂನು ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ವಿವಿಧ ಸರ್ಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು, ನಿವೃತ್ತ ಸರ್ಕಾರಿ ನೌಕರರು, ಮಾಜಿ ಸೈನಿಕರು ಹಾಗೂ ಅವರ ಕುಟುಂಬದ ಸದಸ್ಯರು, ವಿವಿಧ ಸಂಘಟಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾಜಿಕ ಸೇವಾ

...02...

ಮನೋಭಾವ ಹೊಂದಿರುವ ಪುರುಷ ಮತ್ತು ಮಹಿಳೆಯರು, ಮಂಗಳಮುಖಿಯರು, ಸನ್ನಡತೆ ಹೊಂದಿದ ಕಾರಾಗೃಹ ಬಂದಿಗಳು ಮತ್ತು ಸ್ವ ಸಹಾಯ ಸಂಘಗಳ ಸದಸ್ಯರನ್ನು ಅರೇ ಕಾನೂನು ಸ್ವಯಂ ಸೇವಕರು (Para Legal Volunteers) ಅಂತ ಕಾರ್ಯನಿರ್ವಹಿಸಲು ನೇಮಕ ಮಾಡಿಕೊಳ್ಳಬೇಕಾಗಿರುವದರಿಂದ ಸೇವಾ ಮನೋಭಾವನೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ತಮಗೆ ಹತ್ತಿರವಿರುವ ನ್ಯಾಯಾಲಯಗಳ ಆವರಣದಲ್ಲಿರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ತಾಲೂಕ ಕಾನೂನು ಸೇವಾ ಸಮಿತಿಗಳಲ್ಲಿ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಂಡು ಅದನ್ನು ಭರ್ತಿಮಾಡಿ ದಿನಾಂಕ:24-09-2025ರ ಸಂಜೆ 5.30ರ ಅವಧಿಯ ಒಳಗೆ ಖುದ್ದಾಗಿ ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸುವಂತೆ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ ಇವರಿಂದ ನಿರ್ದೇಶಿತರಾಗಿದ್ದೇವೆ.

ತಮ್ಮ ವಿಶ್ವಾಸಿ,

(ಪರಶುರಾಮ ಎಫ್. ದೊಡ್ಡಮನಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಧಾರವಾಡ

MEMBER SECRETARY
District Legal Services Authority
Dharwad

ಪ್ರತಿಯನ್ನು:

1. ಪ್ರಧಾನ ಜಿಲ್ಲಾ & ಸತ್ರ ನ್ಯಾಯಾಲಯ ಧಾರವಾಡದ ನೋಟಿಸ್ ಬೋರ್ಡ್‌ಗೆ.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಪ ವಿಭಾಗಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಇಲಾಖೆ, ಡಿಮ್ಹಾನ್ಸ್ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡದ ಕಛೇರಿಗಳ ನೋಟಿಸ್ ಬೋರ್ಡ್‌ಗೆ.
3. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡದ ನೋಟಿಸ್ ಬೋರ್ಡ್‌ಗೆ
4. ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಧಾರವಾಡದ ನೋಟಿಸ್ ಬೋರ್ಡ್‌ಗೆ.
5. ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಧಾರವಾಡದ ನೋಟಿಸ್ ಬೋರ್ಡ್‌ಗೆ
6. ಸದಸ್ಯ ಕಾರ್ಯದರ್ಶಿಗಳು, ತಾ.ಕಾ.ಸೇ.ಸಮಿತಿ, ಹುಬ್ಬಳ್ಳಿ, ಕಲಘಟಗಿ, ನವಲಗುಂದ & ಕುಂದಗೋಳ ಹಿರಿಯ & ಕಿರಿಯ ನ್ಯಾಯಾಧೀಶರ ನ್ಯಾಯಾಲಯ ಹುಬ್ಬಳ್ಳಿ, ಕಲಘಟಗಿ, ನವಲಗುಂದ & ಕುಂದಗೋಳ ನೋಟಿಸ್ ಬೋರ್ಡ್‌ಗೆ

7. ಅಧ್ಯಕ್ಷರು, ವಕೀಲರ ಸಂಘ ಧಾರವಾಡ, ಹುಬ್ಬಳ್ಳಿ, ಕಲಘಟಗಿ, ನವಲಗುಂದ & ಕುಂದಗೋಳ ಇವರಿಗೆ & ಸದರಿ ಪ್ರಕಟಣೆಯನ್ನು ತಮ್ಮ ಸಂಘದ ನೋಟಿಸ್ ಬೋರ್ಡ್‌ಗೆ ಲಗತ್ತಿಸಲು ವಿನಂತಿಯೊಂದಿಗೆ.
8. ಕಾನೂನು ವಿಶ್ವ ವಿದ್ಯಾಲಯ ನವನಗರ, ಹುಬ್ಬಳ್ಳಿ ಮತ್ತು ಜಿಲ್ಲೆಯಾದ್ಯಂತ ಇರುವ ಎಲ್ಲಾ ಕಾನೂನು ಮಹಾ ವಿದ್ಯಾಲಯಗಳಿಗೆ ಮಾಹಿತಿಯನ್ನು ರವಾನಿಸಲು
9. ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.
10. ಕೇಂದ್ರ ಕಾರಾಗೃಹ, ಧಾರವಾಡ.
11. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಛೇರಿ ನೊಟೀಸ್ ಬೋರ್ಡಿಗೆ
12. ವಾರ್ತಾ ಇಲಾಖೆ, ಧಾರವಾಡ ಇವರಿಗೆ ಸದರಿ ಪ್ರಕಟಣೆಯನ್ನು ಸ್ಥಳೀಯ & ಪ್ರಮುಖ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ.
13. ನಿಲಯ ನಿರ್ದೇಶಕರು, ಆಕಾಶವಾಣಿ, ಧಾರವಾಡ. ಹಾಗೂ ಕೆ.ಎಲ್.ಇ ಧ್ವನಿ, ವಿದ್ಯಾನಗರ, ಹುಬ್ಬಳ್ಳಿ ಇವರಿಗೆ ಪ್ರಕಟಣೆಗಾಗಿ
14. ಕಛೇರಿಯ ಪ್ರತಿ.
15. ಸಾಫ್ಟ್‌ವೇರ್ ಟೇಕ್ನಿಶಿಯನ್, ಜಿಲ್ಲಾ ನ್ಯಾಯಾಲಯ, ಧಾರವಾಡ – ಇವರಿಗೆ ಆನ್‌ಲೈನ್ ಮೂಲಕ ವೆಬ್‌ಹೊಸ್ಟ್ ಮಾಡಲು

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮತ್ತು ತಾಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಅರೇ ಕಾನೂನು ಸ್ವಯಂ ಸೇವಕರ (Para Legal Volunteers)ನೇಮಕಾತಿಗಾಗಿ ಅರ್ಜಿ–2025

ಗೆ,

ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಸಿವಿಲ್ ನ್ಯಾಯಾಲಯದ ಆವರಣ,
ಧಾರವಾಡ. ಇವರಿಗೆ:-

ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸಿ.

| | | |
|---|---|---|
| 1 | ಅರ್ಜಿದಾರರ ಹೆಸರು | |
| 2 | ತಂದೆಯ/ತಾಯಿಯ ಹೆಸರು: | |
| 3 | ಹುಟ್ಟಿದ ದಿನಾಂಕ & ವಯಸ್ಸು | |
| 4 | ವಿಳಾಸ:<br>1) ಖಾಯಂ ವಿಳಾಸ:<br><br>2) ಕಛೇರಿ ವಿಳಾಸ: | |
| 5 | ಮೊಬೈಲ್ ನಂ:<br>ಇಮೇಲ್ ಐಡಿ: | |
| 6 | ವಿದ್ಯಾರ್ಹತೆ: | |
| 7 | ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಸರ್ಕಾರಿ/ಅರೇ ಸರ್ಕಾರಿ/ ಸ್ವಯಂ ಸೇವಾ ಸಂಘ ಸಂಸ್ಥೆಗಳು/ ಮಹಿಳಾ ಸ್ವ ಸಹಾಯ ಸಂಘಗಳು ಕುರಿತಾದ ಪೂರ್ಣ ಮಾಹಿತಿ. | |
| 8 | ಈಗಾಗಲೇ ಅರೇ ಕಾನೂನು ಸ್ವಯಂ ಸೇವಕರಾಗಿ ಜಿ.ಕಾ.ಸೇ.ಪ್ರಾ/ತಾ.ಕಾ.ಸೇ.ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಇದೆ /ಇಲ್ಲ. | |
| 9 | ಜಾತಿ:<br>(ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು) | |
| 10 | ಭಾಷೆಗಳು: ಓದಲು ಹಾಗೂ ಬರೆಯಲು ಗೊತ್ತಿರುವ ಭಾಷೆಗಳು | |
| 11 | ಇತರೆ ವಿಶೇಷ ಮಾಹಿತಿ | |

ನಾನು ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳನ್ನು ತಿಳಿದಿದ್ದು, ಸೇವಾ ಮನೋಭಾವನೆಯಿಂದ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

ಸ್ಥಳ :
ದಿನಾಂಕ :

ಸಹಿ

ಅರ್ಜಿದಾರನ/ಳ